## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 148 |
| ವಿಧಾನ ಪರಿಷತ್ತು ಸದಸ್ಯರು | ಶ್ರೀ ಮುನಿರಾಜುಗೌಡ. ಎಂ.ಪಿ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 5-7-2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ | ಪ್ರಶ್ನೆ ವಿವರ | ಉತ್ತರ |
|---|---|---|
| ಅ) | ಕಳೆದ ವರ್ಷದಲ್ಲಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಹೆಗ್ಗಡಗೆರೆ ಗ್ರಾಮದಲ್ಲಿ ಪೋಡಿ ಗಾಗಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ವಿಲೇಯಾದ ಅರ್ಜಿಗಳ ಸಂಖ್ಯೆ ಎಷ್ಟು; | ಕಳೆದ ವರ್ಷದಲ್ಲಿ (1-6-2022 ರಿಂದ 31-5-2023) ರಾಮನಗರ ಜಿಲ್ಲೆ, ರಾಮ ನಗರ ತಾಲ್ಲೂಕು, ಹೆಗ್ಗಡಗೆರೆ ಗ್ರಾಮಕ್ಕೆ ಸಂಬಂಧಿಸಿದಂತೆ ತತ್ಕಾಲ್ ಪೋಡಿ ಕೋರಿ ಒಟ್ಟು 15 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಈ ಪೈಕಿ 10 ಅರ್ಜಿಗಳ ವಿಲೇ ವಾರಿ ಮಾಡಲಾಗಿದ್ದು ಇನ್ನು 5 ಅರ್ಜಿಗಳು ಬಾಕಿ ಇರುತ್ತವೆ |
| ಆ) | ಪೋಡಿಗಾಗಿ ಸಕಾಲದಲ್ಲಿ ನಿಗಧಿಪಡಿಸಿರುವ ಕಾಲ ಮಿತಿ ಎಷ್ಟು; ನಿಗಧಿತ ಕಾಲಮಿತಿ ಮುಗಿದಿದ್ದರೂ ಅರ್ಜಿಗಳು ವಿಲೇಯಾಗದಿರಲು ಕಾರಣ ಗಳೇನು; (ಪ್ರತಿ ಅರ್ಜಿಗೂ ಪ್ರತ್ಯೇಕವಾಗಿ ಕಾರಣ ತಿಳಿಸು ವುದು) | ಸರ್ಕಾರದ ಅಧಿಸೂಚನೆ ಸಂ: ಸಿಆಸುಇ 2 ಎಸ್‌ಎಸ್‌ಎಂ 2020 ದಿನಾಂಕ:23-11-2020 ರನ್ವಯ ತತ್ಕಾಲ್ ಪೋಡಿ ಕೋರಿ ಸಲ್ಲಿಕೆಯಾಗುವ ಅರ್ಜಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು ಹಂಚಿಕೆಯಾದ ದಿನದಿಂದ 45 ದಿನಗಳಲ್ಲಿ ಇತ್ಯರ್ಥ ಪಡಿಸಲು ಕಾಲಮಿತಿ ನಿಗಧಿಪಡಿಸಲಾಗಿರುತ್ತದೆ.<br>ರಾಮನಗರ ತಾಲ್ಲೂಕು, ಹೆಗ್ಗಡಗೆರೆ ಗ್ರಾಮಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ತತ್ಕಾಲ್ ಪೋಡಿ ಅರ್ಜಿಗಳ ಕಾರಣ ಸಹಿತ ವಿವರವನ್ನು ಅನುಬಂಧದಲ್ಲಿರಿಸಿದೆ. |
| ಇ) | ನಿಗಧಿತ ಅವಧಿಯಲ್ಲಿ ಪೋಡಿ ಅರ್ಜಿಗಳನ್ನು ವಿಲೇ ಮಾಡಲು ಸರ್ಕಾರ ಕೈಗೊಂಡ ಕ್ರಮ ಗಳೇನು? | **ಬಾಕಿಯಿರುವ ತತ್ಕಾಲ್ ಪೋಡಿ ಅರ್ಜಿಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ**<br>1. ಭೂಮಾಪನ ಇಲಾಖೆಯಲ್ಲಿ ಮೋಜಿಣಿ ತಂತ್ರಾಂಶದ ಮುಖಾಂತರ ಅರ್ಜಿಗಳ ಸ್ವೀಕೃತಿ, ಅರ್ಜಿಗಳ ಹಂಚಿಕೆ, ಅಳತೆ ಮಾಡಿ ಅಪ್‌ಲೋಡ್ ಮಾಡುವುದು, ಕಡತಗಳ ಪರಿಶೀಲನೆ ಮೊದಲಾದ ಎಲ್ಲಾ ಅಳತೆ ಪ್ರಕ್ರಿಯೆಗಳನ್ನು ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಆನ್‌ಲೈನ್ ಮೂಲಕ ನಿರ್ವಹಿಸಲಾಗುತ್ತಿದೆ.<br>2. ನಿಯಮಿತವಾಗಿ ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.<br>3. ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.<br>4. ಕಾಲಕಾಲಕ್ಕೆ ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>5. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>6. ಅಗತ್ಯತೆಗನುಗುಣವಾಗಿ ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಭೂಕಂದಾಯ ನಿಯಮಗಳಿಗೆ ಅಗತ್ಯ ತಿದ್ದುಪಡಿ ತಂದು ಸರ್ಕಾರಿ ಭೂಮಾಪಕರು ಹಾಗೂ ಪರವಾನಗಿ ಭೂಮಾಪಕರುಗಳಿಗೆ ಅಳತೆ ಅರ್ಜಿ ಗಳನ್ನು ಸಮರ್ಪಕ ರೀತಿಯಲ್ಲಿ ಹಂಚಿಕೆ ಮಾಡಲಾಗುತ್ತಿದ್ದು, ಇದರಿಂದ ಭೂಮಾಪಕರ ಕಾರ್ಯ ಒತ್ತಡ ಕಡಿಮೆಯಾಗಿ, ಅಳತೆ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲಾಗುತ್ತಿದೆ. |

ಕಂಇ 101 ಎಸ್‌ಎಸ್‌ಸಿ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂದ-1



## ರಾಮನಗರ ತಾಲ್ಲೂಕು, ಹೆಗ್ಗಡಗೆರೆ ಗ್ರಾಮಕ್ಕೆ ಸಂಬಂದಿಸಿದಂತೆ ಬಾಕಿ ಇರುವ ತತ್ಕಾಲ್ ಪೋಡಿ ಅರ್ಜಿಗಳ ಕಾರಣ ಸಹಿತ ವಿವರ

| ಅರ್ಜಿ ಸಂಖ್ಯೆ | ಅರ್ಜಿದಾರರ ಹೆಸರು | ಅರ್ಜಿ ದಿನಾಂಕ | ಸರ್ವೆ ನಂ | ಬಾಕಿಗೆ ಕಾರಣ |
|---|---|---|---|---|
| 29020223255609 | ಪುಟ್ಟಮಲ್ಲಯ್ಯ | 04/02/2023 | 3/*/1 | ಸದರಿ ಅರ್ಜಿಯಂತೆ ಅಳತೆ ಮತ್ತು ದುರಸ್ತಿ ಕಾರ್ಯ ಪೂರ್ಣಗೊಂಡಿದ್ದು ಪಹಣಿ ಇಂಡೀಕರಣಕ್ಕಾಗಿ ಭೂಮಿ ಶಾಖೆಯಲ್ಲಿ ಬಾಕಿಯಿರುತ್ತದೆ |
| 29020123918088 | ಸೋಮಶೇಖರ್ ಎಸ್ | 07/01/2023 | 93/*/1 | ಸದರಿ ಅರ್ಜಿಯು ದಿಃ 16-3-2023 ರಂದು ಅಳತೆಗಾಗಿ ಭೂಮಾಪಕರಿಗೆ ಹಂಚಿಕೆಯಾಗಿದ್ದು ಪ್ರಕರಣದಲ್ಲಿ ತಕರಾರು ಉದ್ಭವಿಸಿರುವುದರಿಂದ ದಿಃ-12-4-2023 ರಂದು ತಕರಾರು ಪ್ರಕರಣ ಅಪ್.ಲೋಡ್ ಮಾಡಿದ್ದು ನಂತರ ಸರ್ಕಾರಿ ಭೂಮಾಪಕರು ತಕರಾರು ಪರಿಶೀಲಿಸಿ ಕಡತ ವನ್ನು ದಿಃ15-5-2023 ರಂದು ಅಪ್.ಲೋಡ್ ಮಾಡಿದ್ದು ಕಡತದಲ್ಲಿ ನ್ಯೂನತೆ ಇರುವುದನ್ನು ಸರಿ ಪಡಿಸಲು ದಿಃ20-6-2023 ರಂದು ಕಡತವನ್ನು ಭೂಮಾಪಕರಿಗೆ ಹಿಂದಿರುಗಿಸಲಾಗಿದೆ. ಭೂಮಾಪಕರು ನ್ಯೂನತೆ ಸರಿಪಡಿಸಿ ಕಡತನ್ನು ಪುನಃ ಅಪ್.ಲೋಡ್ ಮಾಡಲು ಬಾಕಿಯಿರುತ್ತದೆ. |
| 29020722184910 | ಪಿ.ಮುನಿರಾಜು | 18/07/2022 | 11/*/1 | ಸದರಿ ಅರ್ಜಿಯು ದಿಃ11-4-2023 ರವರೆಗೆ ಪಹಣಿ ತಿದ್ದುಪಡಿಗಾಗಿ ತಹಸೀಲ್ದಾರ್ ಹಂತದಲ್ಲಿ ಬಾಕಿಯಿದ್ದು ಪಹಣಿ ತಿದ್ದುಪಡಿ ನಂತರ ಅಳತೆಗಾಗಿ ದಿನಾಂಕ 13-4-2023 ರಂದು ಭೂಮಾಪಕರಿಗೆ ಹಂಚಿಕೆಯಾಗಿದ್ದು ಅಳತೆ ಕ್ರಮಕ್ಕಾಗಿ ಬಾಕಿಯಿರುತ್ತದೆ. |
| 29020323537684 | ಮುಸ್ತಫ | 24/03/2023 | 12/*/2 | ಸದರಿ ಅರ್ಜಿಯು ದಿಃ02-04-2023 ರಿಂದ ಪಹಣಿ ತಿದ್ದುಪಡಿಗಾಗಿ ಆರ್.ಆರ್.ಶಿರಸ್ತೆದಾರ್(ತಹಸೀಲ್ದಾರ್) ಬಳಿ ಬಾಕಿಯಿರುತ್ತದೆ. |
| 29020423692293 | ಸುರೇಶ | 27/04/2023 | 50/*/2 | ಸದರಿ ಅರ್ಜಿಯು ಅಳತೆ ಕುರಿತು ಭೂಮಾಪಕರಿಗೆ ದಿನಾಂಕ 17-5-2023 ರಂದು ಹಂಚಿಕೆಯಾಗಿದ್ದು ಅಳತೆ ಕೆಲಸ ಪೂರ್ಣಗೊಂಡಿದ್ದು ದುರಸ್ತಿಗಾಗಿ ಬಾಕಿಯಿರುತ್ತದೆ. |